# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 201
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 10/12/2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರಸ | ವಿಷಯ | ಉತ್ತರ |
|---|---|---|
| ಅ | ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಅನಗವಾಡಿ ಹೋಬಳಿಗೆ ಪರಿಶಿಷ್ಟ ಜಾತಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮಂಜೂರಾಗಿರುವುದು ನಿಜವೇ; | ಹೌದು |
| ಆ | ಹಾಗಿದ್ದಲ್ಲಿ, ಸದರಿ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅನಗವಾಡಿ ಹೋಬಳಿಯಲ್ಲಿಯೇ ಸರ್ಕಾರಿ ಜಮೀನು ಲಭ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br><br>ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕು, ಅನಗವಾಡಿ ಹೋಬಳಿಗೆ ಪರಿಶಿಷ್ಟ ಜಾತಿಯ ಡಾ॥ ಬಿ.ಆರ್ ಅಂಬೇಡ್ಕರ್ ವಸತಿ ಶಾಲೆಯನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 114 ಮೊದೇಶಾ 2016, ದಿನಾಂಕ: 14-03-2017ರಲ್ಲಿ ಮಂಜೂರು ಮಾಡಲಾಗಿದೆ. ಈ ಆದೇಶದಲ್ಲಿ ವಸತಿ ಶಾಲೆ ಮಂಜೂರಾದ ದಿನಾಂಕದಿಂದ 3 ತಿಂಗಳೊಳಗೆ ನಿವೇಶನ ಪಡೆಯತಕ್ಕದ್ದು, ಒಂದು ವೇಳೆ ವಸತಿ ಶಾಲೆ ಮಂಜೂರಾದ ಹೋಬಳಿಯಲ್ಲಿ ನಿವೇಶನ ಲಭ್ಯವಿಲ್ಲದಿದ್ದಲ್ಲಿ, ನಿವೇಶನ ಲಭ್ಯವಿರುವ ಹೋಬಳಿಗೆ ವಸತಿ ಶಾಲೆಯನ್ನು ಸ್ಥಳಾಂತರಿಸಲಾಗುವುದು ಎಂದು ನಿಬಂಧನೆ ವಿಧಿಸಲಾಗಿದೆ.<br><br>ಬೀಳಗಿ ತಾಲ್ಲೂಕಿನ ತಹಶೀಲ್ದಾರರು ಮತ್ತು ಪುನರ್ ವಸತಿ ಅಧಿಕಾರಿಯವರ ವರದಿಯಲ್ಲಿ ಅನಗವಾಡಿ ಹೋಬಳಿಯ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಜಮೀನು ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ವರದಿಯ ಆಧಾರದ ಮೇಲೆ ಜಿಲ್ಲಾಡಳಿತವು ಅನಗವಾಡಿ ಗ್ರಾಮ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಖಾಸಗಿ ಜಮೀನನ್ನು ನೀಡಲು ಪತ್ರಿಕೆ ಪ್ರಕಟಣೆ ನೀಡಲಾಗಿತ್ತು. ಈ ಪ್ರಕಟಣೆಗೆ ಅನಗವಾಡಿಯ ಹೋಬಳಿಯ ಸಮೀಪದಲ್ಲಿರುವ ಬೀಳಗಿ ಹೋಬಳಿಯ ಬಾಡಗಂಡಿ ಗ್ರಾಮಸ್ಥರು ಖಾಸಗಿ ಜಮೀನನ್ನು ನೀಡಲು ಒಪ್ಪಿಗೆ ಸೂಚಿಸಿರುವುದರಿಂದ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಮೀನು ಖರೀದಿ ಸಮಿತಿಯು ಬಾಡಗಂಡಿ |
| ಇ | ಸರ್ಕಾರಿ ಜಮೀನು ಲಭ್ಯವಿದ್ದಾಗ್ಯೂ ಸಹ ಸದರಿ ವಸತಿ ಶಾಲೆಯನ್ನು ಅನಗವಾಡಿ ಹೋಬಳಿಯಿಂದ ಬೇರೆ ಹೋಬಳಿಯ ಗ್ರಾಮಕ್ಕೆ ಸ್ಥಳಾಂತರಿಸಲು ಉದ್ದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ | ಹೋಬಳಿಯಿಂದ ಹೋಬಳಿಗೆ ವಸತಿ ಶಾಲೆಯನ್ನು ಸ್ಥಳಾಂತರಿಸಿ ಖಾಸಗಿ ಜಮೀನನ್ನು ಖರೀದಿಸುತ್ತಿರುವುದು ನಿಜವೇ; (ಮಾಹಿತಿ ಒದಗಿಸುವುದು) | |

| | | |
|---|---|---|
| | | ಗ್ರಾಮದ ಜಮೀನನ್ನು ಖರೀದಿಸಲು ನಿರ್ಧರಿಸಿ. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ ಸಮಯದಲ್ಲಿ ಅನಗವಾಡಿ ಗ್ರಾಮದಲ್ಲಿ ಸರ್ಕಾರಿ ಜಮೀನು ಇರುವುದಾಗಿ ತಿಳಿದುಬಂದಿರುತ್ತದೆ. ಆದರೆ. ಬಾಡಗಂಡಿ ಗ್ರಾಮದ ಖಾಸಗಿ ಜಮೀನು ಖರೀದಿಸಲು ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರ ಪಡೆದಿರುವುದರಿಂದ ಮತ್ತು ವಸತಿ ಶಾಲೆಯ ಮಂಜೂರಾತಿ ಆದೇಶದಂತೆ ಅನಗವಾಡಿಗೆ ಮಂಜೂರಾದ ವಸತಿ ಶಾಲೆಯನ್ನು ಬೀಳಗಿ ಹೋಬಳಿಯ ಬಾಡಗಂಡಿ ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆ.<br><br>ಅನಗವಾಡಿ ಹೋಬಳಿಯ ಗ್ರಾಮಸ್ಥರು. ಜನಪ್ರತಿನಿಧಿಗಳು ಸಂಘಟನೆಗಳು ಮತ್ತು ಸ್ಥಳೀಯ ಶಾಸಕರ ಮನವಿಯನ್ನು ಪುರಸ್ಕರಿಸಿ. ಅನಗವಾಡಿ ಹೋಬಳಿಗೆ ಹೊಸದಾಗಿ ವಸತಿ ಶಾಲೆಯನ್ನು ಮಂಜೂರು ಮಾಡಲು ಕೋರಿದ್ದು, ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. |
| ಉ | ಖರೀದಿಸಲು ಪ್ರಸ್ತಾಪಿಸಿರುವ ಖಾಸಗಿ ಜಮೀನು ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿರುವ ಬಗ್ಗೆ ಹಾಗೂ ಕೂಡುರಸ್ತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ "ಸ್ಥಳ ಪರಿಶೀಲನಾ ವರದಿಯನ್ನು" ಪಡೆಯಲಾಗಿದೆಯೇ? (ಪಡೆದಿದ್ದಲ್ಲಿ ಪ್ರತಿಯನ್ನು ಒದಗಿಸುವುದು) | ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಾಗಲಕೋಟೆ ಇವರು ಖರೀದಿಗೆ ಪ್ರಸ್ತಾಪಿಸಿರುವ ಜಮೀನನ್ನು ಪರಿಶೀಲಿಸಿ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿರುವ ಕುರಿತು ವರದಿ ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ). |

ಸಕಇ 614 ಮೊದೇಶಾ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

KPAD

ಕರ್ನಾಟಕ ಸರ್ಕಾರ

ಸಂ:ಸಕಇ/ಲೆಕ್ಕ/ವ.ಶಾ/ನಿವೇಶನ ಖರೀದಿ/ಸಿಆರ್/2018-19

523

ಉಪನಿರ್ದೇಶಕರವರ ಕಚೇರಿ,
ಸಮಾಜ ಕಲ್ಯಾಣ ಇಲಾಖೆ,
ಜಿಲ್ಲಾ ಆಡಳಿತ ಭವನ, ರೂಂ.ನಂ.102,
ನವನಗರ-ಬಾಗಲಕೋಟ,
ದೂರವಾಣಿ ಸಂಖ್ಯೆ:08354-235526
ಇ-ಮೇಲ್:dswobagalkot@gmail.com

ದಿನಾಂಕ: 31.07.2018.

ಗೆ,

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.

ಮಾನ್ಯರೇ,

ವಿಷಯ:- ಡಾ||ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ ತಾ||ಬೀಳಗಿ ಈ ವಸತಿ ಶಾಲೆಯ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಖಾಸಗಿ ಜಮೀನು ಖರೀದಿಸಲು ಪ್ರಸ್ತಾವನೆ ಸಲ್ಲಿಸುವ ಕುರಿತು.

ಉಲ್ಲೇಖ:-
1) ಸರ್ಕಾರದ ಆದೇಶ ಸಂಖ್ಯೆ:ಸಕಇ 114 ಮೋದೇಶಾ 2016, ಬೆಂಗಳೂರು ದಿನಾಂಕ:14.03.2017.
2) ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಬೀಳಗಿ ರವರ ಪತ್ರ ದಿನಾಂಕ:05.03.2018.
3) ತಹಶೀಲ್ದಾರರು ಬೀಳಗಿ ರವರ ಪತ್ರ ದಿನಾಂಕ:16.03.2018.
4) ದಿನಾಂಕ:16.07.2018 ರಂದು ಜಿಲ್ಲಾಧಿಕಾರಿಗಳು ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಜರುಗಿದ ಜಮೀನು ಸಭೆಯ ನಡುವಳಿಗಳು.

......

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಸರ್ಕಾರಿ ಆದೇಶದಲ್ಲಿ ಡಾ||ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ ತಾ||ಬೀಳಗಿ ವಸತಿ ಶಾಲೆಯು 2016-17ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ಇಲ್ಲಿಯವರೆಗೆ ಸ್ವಂತ ಕಟ್ಟಡ ಇಲ್ಲದೇ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಉಲ್ಲೇಖಿತ (2) ರ ಪತ್ರದಲ್ಲಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಬೀಳಗಿ ರವರ ಪತ್ರದಡಿಯಲ್ಲಿ ಶ್ರೀ.ಬಸಪ್ಪ ನೀಲಪ್ಪ ಸೂಳಕೇರಿ ಸಾ||ಬಾಡಗಂಡಿ ಹಾಗೂ ಶ್ರೀಮತಿ.ಮಹಾದೇವಿ ನೀಲಪ್ಪ ಸೂಳಕೇರಿ ಸಾ||ಬಾಡಗಂಡಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಇವರ ಮಾಲೀಕತ್ವದ ಶ್ರೀ.ಬಸಪ್ಪ ನೀಲಪ್ಪ ಸೂಳಕೇರಿ ಸರ್ವೇ ನಂ.121/2 5ಎಕರೆ 25ಗುಂಟೆ ಹಾಗೂ ಶ್ರೀಮತಿ.ಮಹಾದೇವಿ ನೀಲಪ್ಪ ಸೂಳಕೇರಿ ಇವರ ಸರ್ವೇ ನಂ.141/2 3ಎಕರೆ 15ಗುಂಟೆ ಹೀಗೆ ಒಟ್ಟು 9 ಎಕರೆ ಜಮೀನು ಮಾರಾಟ ಮಾಡಲು ಒಪ್ಪಿಗೆ ನೀಡಿದ್ದು ದಾಖಲೆಗಳೊಂದಿಗೆ ಖರೀದಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಜಮೀನನ್ನು ಖರೀದಿಸಲು ದಿನಾಂಕ:16.07.2018 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾಮಟ್ಟದ ಖರೀದಿ ಸಮಿತಿಯಲ್ಲಿ ನಿರ್ಣಯಿಸಲಾಗಿದೆ. ನಡುವಳಿಕೆ ಪ್ರತಿ ಲಗತ್ತಿಸಿದೆ.

| ಕ್ರ. ಸಂ. | ಭೂ ಮಾಲಿಕರ ಹೆಸರು | ಲಭ್ಯ ವಿರುವ ಜಮೀನು | ವಸತಿ ನಿಲಯಕ್ಕೆ ಬೇಕಾಗುವ ಜಮೀನು | ಸಭೆಯನ್ನು ನಿರ್ಣಯಿಸಿದ ದರ (ರೂ.ಲಕ್ಷಗಳಲ್ಲಿ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಶ್ರೀ.ಬಸಪ್ಪ ನೀಲಪ್ಪ ಸೂಳಕೇರಿ ಸಾ||ಬಾಡಗಂಡಿ | 5-25 | 9-00 | ಪ್ರತಿ ಎಕರೆಗೆ ರೂ.18.00 ಲಕ್ಷ | 162.00 ಲಕ್ಷ |
| 2 | ಶ್ರೀಮತಿ.ಮಹಾದೇವಿ ನೀಲಪ್ಪ ಸೂಳಕೇರಿ ಸಾ||ಬಾಡಗಂಡಿ | 3-15 | | | |

ಮುಂದುವರಿದಿದೆ. ...2.,

ಖಾಸಗಿಯವರಿಂದ ಜಮೀನು ಖರೀದಿಗಾಗಿ ರೂ.162.00 ಲಕ್ಷಗಳ ಅನುದಾನವನ್ನು ಭೂ ಮಾಲೀಕರಿಗೆ ಸಂದಾಯ ಮಾಡಬೇಕಾಗಿದ್ದು, ಜಮೀನು ಮಾಲೀಕರೊಂದಿಗೆ ವಸತಿ ಶಾಲೆಗೆ ಬೇಕಾಗುವ 09-00 ಎ/ಗುಂ ಕ್ಷೇತ್ರವನ್ನು ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದ್ದು, ರೂ.162.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು ಬಾಗಲಕೋಟ ರವರ ಹೆಸರಿನಲ್ಲಿ ಬಿಡುಗಡೆ ಮಾಡಲು ಕೋರಿದೆ. ಹಾಗೂ ಸರ್ಕಾರದ ಪತ್ರ ಸಂಖ್ಯೆ: ಕಂಇ/54/ಭೂಸ್ವಾಳ/214/ಬೆಂಗಳೂರು ದಿನಾಂಕ:12.08.2016 ರಲ್ಲಿಯ ನಿರ್ದೇಶನದಂತೆ ಖರೀದಿಗೆ ಭೂ ಮಾಲೀಕರಿಂದ ಒಪ್ಪಿಗೆ ಪತ್ರ ಪಡೆದ ದಿನಾಂಕದಿಂದ ಜಮೀನಿನ ಖರೀದಿಯ ನೊಂದಣಿ ದಿನಾಂಕದವರೆಗೆ ಭೂಸ್ವಾಧೀನ ಕಾಯ್ದೆ 2013 ರ ಕಲಂ 30(3) ರಂತೆ ಶೇ.12% ರಷ್ಟು ಹೆಚ್ಚುವರಿ ಮಾರುಕಟ್ಟೆ ದರವನ್ನು ಮೂಲ ಮಾರುಕಟ್ಟೆ ಜಮೀನಿನ ಮೌಲ್ಯಕ್ಕೆ ಲೆಕ್ಕ ಹಾಕಿ ಭೂ ಮಾಲೀಕರಿಗೆ ನೀಡಲು ನಿರ್ದೇಶನವಿರುವುದರಿಂದ ಆ ಪ್ರಕಾರ ಶೇ.12% ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆಯನ್ನು ಕೂಡಾ ಬಿಡುಗಡೆ ಮಾಡಲು ವಿನಂತಿಸಿದೆ. ಇದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹಣೆಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಉಪನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಬಾಗಲಕೋಟೆ.

ಲಗತ್ತು :-

1) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿ:16.07.2018 ರಂದು ಜರುಗಿದ ಸಭೆಯ ನಡುವಳಿಕೆಗಳು.
2) ಭೂಮಾಲೀಕರಿಂದ ಒಪ್ಪಿಗೆ ಪತ್ರ.
3) ಸರ್ವೇ ನಂ. ಉತಾರೆ.
4) ಉಪವಿಯೋಜನ ಅಧಿಕಾರಿಗಳು ಬೀಳಗಿ ಇವರಿಂದ ಪಡೆದ ದರಪಟ್ಟಿ.
5) ತಹಶೀಲ್ದಾರ ಹಾಗೂ ಪುನರ್ವಸತಿ ಅಧಿಕಾರಿಗಳು ಕೃ.ಮೇ.ಯೋ.ಬೀಳಗಿ ಇವರಿಂದ ಜಮೀನು ಲಭ್ಯವಿಲ್ಲವೆಂಬ ಬಗ್ಗೆ ಪಡೆದ ಪತ್ರ.
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ವಿ.ಪ.ಸಿ. ಬೀಳಗಿ ಇವರಿಂದ ಪಡೆದ ನಿರಾಪೇಕ್ಷಣ ಪತ್ರ.
7) ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೀಳಗಿ ರವರ ಪತ್ರ.

ಕರ್ನಾಟಕ ಸರ್ಕಾರ

## ಡಾ||ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ ತಾ:ಬೀಳಗಿಗೆ ನಿವೇಶನ ಖರೀದಿ ಕುರಿತು ದಿನಾಂಕ: 16.07.2018 ರಂದು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಸಮಿತಿ ಸಭೆಯ ನಡುವಳಿಗಳು

**ಸಭೆಗೆ ಹಾಜರಿದ್ದ ಅಧಿಕಾರಿಗಳು :-**

| | | |
|---|---|---|
| 1 | ಜಿಲ್ಲಾಧಿಕಾರಿಗಳು ಬಾಗಲಕೋಟ. | ಅಧ್ಯಕ್ಷರು |
| 2 | ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟ. | ಅಹ್ವಾನಿತರು |
| 3 | ಉಪವಿಭಾಗದ ಸಹಾಯಕ ಆಯುಕ್ತರು ಬಾಗಲಕೋಟ. | ಸದಸ್ಯರು |
| 4 | ಜಿಲ್ಲಾ ವ್ಯವಸ್ಥಾಪಕರು, ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬಾಗಲಕೋಟ | ಸದಸ್ಯರು |
| 5 | ಜಿಲ್ಲಾ ಹಿಂದುಗಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಅಧಿಕಾರಿಗಳು ಬಾಗಲಕೋಟ. | ಸದಸ್ಯರು |
| 6 | ಉಪನೋಂದಣಿ ಅಧಿಕಾರಿಗಳು ಬೀಳಗಿ. | ಅಹ್ವಾನಿತರು |
| 7 | ತಹಶೀಲ್ದಾರರು ಬೀಳಗಿ | ಅಹ್ವಾನಿತರು |
| 8 | ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೀಳಗಿ. | ಅಹ್ವಾನಿತರು |
| 9 | ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ | ಸದಸ್ಯ ಕಾರ್ಯದರ್ಶಿಗಳು |

**ಭೂಮಾಲೀಕರು**

1. ಶ್ರೀ ಬಸಪ್ಪ ನೀಲಪ್ಪ ಸೂಳಕೇರಿ
2. ಶ್ರೀಮತಿ ಮಹಾದೇವಿ ನೀಲಪ್ಪ ಸೂಳಕೇರಿ

ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಾಗಲಕೋಟ ಇವರು ಸಭೆಗೆ ಹಾಜರಾದ ಈ ಸಮಿತಿ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಹಾಗೂ ಎಲ್ಲ ಸದಸ್ಯರಿಗೆ, ಭೂ ಮಾಲೀಕರಿಗೆ ಸ್ವಾಗತಿಸಿ, ಡಾ||ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗೆ ಖಾಸಗಿ ಜಮೀನು ಖರೀದಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಸಂಪೂರ್ಣ ವಿಷಯವನ್ನು ಸಭೆಯಲ್ಲಿ ವಿವರಿಸಿದರು.

ಡಾ||ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ 2017-18 ರಿಂದ ಪ್ರಾರಂಭವಾಗಿದ್ದು, ಈ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 10 ಎಕರೆ ಸರ್ಕಾರಿ ನಿವೇಶನವನ್ನು ಮಂಜೂರು ಮಾಡಲು ತಹಶೀಲ್ದಾರ ಬೀಳಗಿ ಇವರಿಗೆ ಕೋರಿದ್ದು, ತಹಶೀಲ್ದಾರ ಬೀಳಗಿ ಇವರು ಹಾಗೂ ಪುನರ್ವಸತಿ ಅಧಿಕಾರಿಗಳು ಕೃ.ಮೇ.ಯೋ. ಬೀಳಗಿ ಇವರು ತಾಲ್ಲೂಕಿನ ಅನಗವಾಡಿ ಗ್ರಾಮದಲ್ಲಿ ಯಾವುದೇ ಸರ್ಕಾರಿ ಜಮೀನು ಇರುವುದಿಲ್ಲ ಎಂದು ವರದಿ ನೀಡಿದ್ದು ಇರುತ್ತದೆ.

ದಿನಾಂಕ: 29-01-2018 ರಂದು ಈ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕಾಗಿ ಅನಗವಾಡಿ ಗ್ರಾಮದಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ 8 ರಿಂದ 10 ಎಕರೆ ಖಾಸಗಿ ಜಮೀನನ್ನು ಖರೀದಿ ನೀಡಲು ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಅದರಂತೆ ಈ ಕೆಳಗಿನ ಮಾಲ್ಕಿದಾರರು ಜಮೀನನ್ನು ಖರೀದಿ ನೀಡುವ ಕುರಿತು ಅನಗವಾಡಿ ಗ್ರಾಮದ ಸಮೀಪವಿರುವ ಬಾಡಗಂಡಿ ಗ್ರಾಮದ ಖಾಸಗಿ ಮಾಲೀಕರಿಂದ ಪ್ರಸ್ತಾವನೆಗಳನ್ನು ಪಡೆದು ಉಪವಿಭಾಗಾಧಿಕಾರಿಗಳು ಜಮಖಂಡಿ ಇವರು ಸಲ್ಲಿಸಿರುತ್ತಾರೆ ಎಂಬ ವಿಷಯವನ್ನು ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರು ಸಭೆಯ ಗಮನಕ್ಕೆ ತಂದರು.

| ಕ್ರ. ಸಂ | ಕಟ್ಟಡ ನಿರ್ಮಾಣಕ್ಕಾಗಿ ಜಮೀನು ಖರೀದಿ ಮಾಡುವ ವಸತಿ ಶಾಲೆಯ ಹೆಸರು | ಖಾಸಗಿ ಜಮೀನು ಖರೀದಿಗಾಗಿ ನೀಡುವವರ ಹೆಸರು | ಜಮೀನಿನ ರಿ.ಸ.ಸಂಖ್ಯೆ | ಹಿಡುವಳಿ (ಎ/ಗುಂ) | ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ ದಾಖಲೆಗಳು | ಜಮೀನು ಖರೀದಿ ನೀಡಲು ಮಾಲೀಕರಿಂದ ನೀಡಲಾದ ಬೇಡಿಕೆ ಮೊತ್ತ (ಪ್ರತಿ ಎಕರೆಗೆ) |
|---|---|---|---|---|---|---|
| 1 | ಡಾ॥ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ ತಾ:ಬೀಳಗಿ. | ಶ್ರೀ ಬಸಪ್ಪ ನೀಲಪ್ಪ ಸೂಳಕೇರಿ | ಸರ್ವೇ ನಂ: 121/2 | 5-25 | 1. ಗೇಣಿ ಮತ್ತು ಪಹಣಿ (R.T.C) ಪತ್ರ<br>2. ಮ್ಯುಟೇಶನ್ ರಿಜಿಸ್ಟರ್ ಪ್ರತಿ.<br>3. ಋಣಭಾರ ಪ್ರಮಾಣ ಪತ್ರ (Encumbrence Certificate ) (ನಮೂನೆ 15)<br>4. ಜಮೀನು ಖರೀದಿ ನೀಡಲು ಒಪ್ಪಿಗೆ ಪತ್ರ<br>5. AEE Hescom Bilagi. ಇವರ NOC ಪತ್ರ<br>6. P.T. ಸೀಟ್. | 21.00 ಲಕ್ಷ |
| 2 | ಸದರ | ಶ್ರೀಮತಿ. ಮಹಾದೇವಿ ನೀಲಪ್ಪ ಸೂಳಕೇರಿ | ಸರ್ವೇ ನಂ: 141/2 | 3-15 | 1. ಗೇಣಿ ಮತ್ತು ಪಹಣಿ (R.T.C) ಪತ್ರ<br>2. ಮ್ಯುಟೇಶನ್ ರಿಜಿಸ್ಟರ್ ಪ್ರತಿ<br>3. ಋಣಭಾರ ಪ್ರಮಾಣ ಪತ್ರ (Encumbrence Certificate ) (ನಮೂನೆ 15)<br>4. ಜಮೀನು ಖರೀದಿ ನೀಡಲು ಒಪ್ಪಿಗೆ ಪತ್ರ.<br>5. AEE Hescom Bilagi ಇವರ NOC ಪತ್ರ.<br>6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು PWD ಬೀಳಗಿ ಇವರಿಂದ ಅಂತರ (Distance) ಹಾಗೂ ಬಿನ್‌ಶೇತ್ಕಿ ಮಾಡಿಕೊಳ್ಳಲು NOC ಪ್ರಮಾಣ ಪತ್ರ.<br>7. P.T. ಸೀಟ್. | 21.00 ಲಕ್ಷ |

ಜಿಲ್ಲಾಧಿಕಾರಿಗಳು ಬಾಗಲಕೋಟ ಇವರು ಡಾ॥ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿ ಕಟ್ಟಡ ನಿರ್ಮಾಣಕ್ಕಾಗಿ ಎಷ್ಟು ಜಮೀನು ಅವಶ್ಯಕತೆಯಿದೆ ಎಂದು ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರನ್ನು ಕೇಳಲಾಗಿ, ಆಗ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರು ಡಾ॥ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಅನಗವಾಡಿಗೆ 9.00 ಎಕರೆ ಜಮೀನು ಅವಶ್ಯಕವಿದ್ದು, ಅ.ನಂ: 01 ಮಾಲ್ಕಿದಾರರ 5.25 ಎಕರೆ ಹಾಗೂ ಅ.ನಂ: 02 ಮಾಲ್ಕಿದಾರರ 3.15 ಎಕರೆ ಇದ್ದು ಒಟ್ಟು: 9. 00 ಎಕರೆ ಜಮೀನನ್ನು ಖರೀದಿಗೆ ನೀಡಲು ಸದರಿ ರಿ.ಸ.ನಂಗಳ ಭೂ ಮಾಲೀಕರು ಒಪ್ಪಿದ್ದರಿಂದ ಪ್ರಸ್ತುತ ಜಮೀನುಗಳನ್ನು ಸದರಿ ಉದ್ದೇಶಕ್ಕಾಗಿ ಖರೀದಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ, ಜಿಲ್ಲಾಧಿಕಾರಿಗಳು ಮಾತನಾಡಿ ಈ ಜಮೀನುಗಳು ಸದರ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಯೋಗ್ಯವಿರುವ ಬಗ್ಗೆ ಪರಿಶೀಲಿಸಿದ್ದಿರಾ ಎಂದು ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರನ್ನು ಕೇಳಲಾಗಿ, ಆಗ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ ಈ ಜಮೀನುಗಳಲ್ಲಿ ಅ.ನಂ: ಸರ್ವೇ ನಂ: 1) ಸರ್ವೇ ನಂ: 121/2 2) 141/2 ಜಮೀನುಗಳನ್ನು ಸ್ಥಳ ಪರಿಶೀಲನೆ ಮಾಡಲಾಗಿ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಯೋಗ್ಯವಾಗಿರುತ್ತವೆ ಎಂಬ ಅಭಿಪ್ರಾಯವನ್ನು ತಿಳಿಸಿದರು. ಜಮೀನಿನ ಮಾಲೀಕರಾದ ಶ್ರೀ. ಬಸಪ್ಪ ನೀಲಪ್ಪ ಸೂಳಕೇರಿ ಇವರು ಮಾತನಾಡಿ ಈ ಮೇಲಿನ ಎರಡು ಸರ್ವೇ ನಂಬರ ಜಮೀನುಗಳು ನಮ್ಮ

ಬುಂಬದಾಗಿದ್ದು, ಸದರಿ ಜಮೀನುಗಳನ್ನು ಪ್ರಸ್ತುತ ಉದ್ದೇಶಕ್ಕಾಗಿ ಖರೀದಿ ಕೊಡಲು ಸಂಪೂರ್ಣ ಒಪ್ಪಿಗೆ ಇರುತ್ತದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಸದರಿ ಉದ್ದೇಶಕ್ಕಾಗಿ ಖರೀದಿಸಲು ಇಚ್ಛಿಸಿರುವ ಜಮೀನುಗಳು ಖರೀದಿಯಿಂದ ಯಾವುದಾದರೂ ಕಾಯ್ದೆಯು ಉಲ್ಲಂಘನೆಯಾಗುತ್ತದೇಯೋ? ಎಂಬ ಬಗ್ಗೆ ಉಪವಿಭಾಗಾಧಿಕಾರಿಗಳು ಜಮಖಂಡಿ ಇವರಿಗೆ ಜಿಲ್ಲಾಧಿಕಾರಿಗಳು ಕೇಳಲಾಗಿ ಉಪವಿಭಾಗಾಧಿಕಾರಿಗಳು ಜಮಖಂಡಿ ಇವರು ದಿನಾಂಕ: 24-06-2017 ಪತ್ರದಲ್ಲಿ ಪ್ರಸ್ತಾಪಿತ ಜಮೀನುಗಳು ಮೂಲತಃ ಪಟ್ಟಾ ಜಮೀನುಗಳಾಗಿದ್ದು, ಸದರಿ ಜಮೀನುಗಳು ಸರ್ಕಾರಿ ಜಮೀನುಗಳಾಗಿರುವದಿಲ್ಲ/ ಸರ್ಕಾರದಿಂದ ಭೂ ಮಂಜೂರಾದ ಜಮೀನುಗಳಾಗಿರುವದಿಲ್ಲ / ಗೇಣಿ ಜಮೀನುಗಳಾಗಿರುವದಿಲ್ಲ/ ಸರ್ಕಾರಿ ಚಾಕರಿ ಜಮೀನುಗಳಾಗಿರುವದಿಲ್ಲ/ ಪಿಟಿಸಿಎಲ್ ಕಾಯ್ದೆಗೆ ಒಳಪಡುವದಿಲ್ಲ/ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡುವುದಿಲ್ಲ/ಸದರಿ ಜಮೀನುಗಳ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯಗಳು ಇರುವದಿಲ್ಲ. ಯಾವುದೇ ಭಾರವಾದ ವಿದ್ಯುತ್ ಸಂಪರ್ಕ ಇರುವುದಿಲ್ಲ. ಈ ಜಮೀನುಗಳು ಮೂಲತಃ ಗ್ರಾಮ ನೌಕರ ಇನಾಮ 6ಬಿ ಜಮೀನುಗಳಾಗಿದ್ದು, ಡ.ನಂ. 3016 ರಡಿ ರಿಗ್ರ್ಯಾಂಟ ಆಗಿದ್ದು ಡ.ನಂ. 4267 ಹಾಗೂ 4487 ರ ಪ್ರಕಾರ ರಹಿತವಾರಿಯಾಗಿದ್ದು, ಮೂಲತಃ ರಿ.ಸ.ನಂ.121/1, 5-25 ಎಕರೆ ಪೋಡಿ ಎಂ.ಆರ್.ನಂ.ಟಿ 23/12/13 ಪ್ರಕಾರ ಹಿಸ್ಸಾ ದುರಸ್ತಿ ಆಗಿ 121/2 ಅಂತಾ ಬದಲಾವಣೆಯಾಗಿರುತ್ತದೆ. ಹಾಗೂ 141/2 ರ ಕ್ಷೇತ್ರದಲ್ಲಿ ಜೆಸಿಬಿ ಕಾಲುವೆ ಹಾದು ಹೋಗಿರುವುದರಿಂದ ಉತ್ತರ ಭಾಗದ 3-15 ಎಕರೆ ಜಮೀನನ್ನು ಖರಿದಿಸಬಹುದಾಗಿದೆ. ಈ ಜಮೀನು ಕಪ್ಪು ಹಾಗೂ ಕೆಂಪು ಮಿಶ್ರಿತ ಮಣ್ಣಿನಿಂದ ಕೂಡಿದ್ದು, ಕೊಳವೆ ಬಾವಿಯಿಂದ ನೀರಾವರಿ ಸೌಲಭ್ಯ ಇದ್ದು, ನೀರಾವರಿ ಬೆಳೆ ಬೆಳೆಯುವ ಫಲವತ್ತಾದ ನೀರಾವರಿ ಜಮೀನುಗಳು ಆಗಿರುತ್ತವೆ ಹಾಗೂ ಯಾವುದೇ ಕಾಯ್ದೆ ಉಲ್ಲಂಘನೆಯಾಗಿರುವದಿಲ್ಲ ಎಂದು ಉಪವಿಭಾಗಾಧಿಕಾರಿಗಳು ಜಮಖಂಡಿ ಇವರು ವರದಿ ಸಲ್ಲಿಸಿರುತ್ತಾರೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾಧಿಕಾರಿಗಳು ಈ ಜಮೀನುಗಳ ದರ ನಿಗದಿ ಕುರಿತು ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟ ಇವರಿಗೆ ಕೇಳಿದಾಗ ಅಪರ ಜಿಲ್ಲಾಧಿಕಾರಿಗಳು ಉಪನೋಂದಣಿ ಅಧಿಕಾರಿಗಳು ಬೀಳಗಿ ಇವರು ಬೀಳಗಿ ತಾಲ್ಲೂಕಿನ 2017-18ನೇ ಸಾಲಿನ ಮಾರುಕಟ್ಟೆ ಬೆಲೆ ನಿರ್ಧರಣಾ ಸಮಿತಿ ನಿರ್ಧರಿಸಿದ ಮಾರ್ಗಸೂಚಿ ಬೆಲೆ ಪ್ರಕಾರ ಬಾಗಾಯತ ಜಮೀನ ಪ್ರತಿ ಎಕರೆಗೆ ರೂ.6.00 ಲಕ್ಷ ನಿಗದಿಪಡಿಸಲಾಗಿರುತ್ತದೆ. ಸರ್ಕಾರಿ ಆದೇಶ ದಿನಾಂಕ: 20-06-2010 ರನ್ವಯ ಜಮೀನಿನ ಮಾರ್ಗಸೂಚಿ ಬೆಲೆ 3 ಪಟ್ಟು ಪರಿಗಣಿಸಿದಲ್ಲಿ ಪ್ರತಿ ಎಕರೆಗೆ ರೂ. 18.00 ಲಕ್ಷ ಆಗುತ್ತದೆ ಎಂದು ಉಪವಿಭಾಗಾಧಿಕಾರಿಗಳು ಜಮಖಂಡಿ ಇವರು ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟ ಇವರು ಸಭೆಯ ಗಮನಕ್ಕೆ ತಂದರು.

ಪ್ರತಿ ಎಕರೆಗೆ ರೂ. 18.00 ಲಕ್ಷಗಳ ಬೆಲೆಗೆ ಖರೀದಿ ಕೊಡುವ ಕುರಿತು ಜಿಲ್ಲಾಧಿಕಾರಿಗಳು ಮಾತನಾಡಿ ಮೇಲಿನ ದರಗಳಿಗೆ ಜಮೀನನ್ನು ಖರೀದಿ ನೀಡಲು ಒಪ್ಪಿಗೆ ಇದೆಯೋ? ಅಥವಾ ಇಲ್ಲವೋ? ಎಂಬ ಬಗ್ಗೆ ಭೂಮಾಲೀಕರನ್ನು ಪ್ರಶ್ನಿಸಿದಾಗ ಭೂಮಾಲೀಕರಾದ 1) ಶ್ರೀ.ಬಸಪ್ಪ ನೀಲಪ್ಪ ಸೂಳಿಕೇರಿ 2) ಶ್ರೀಮತಿ.ಮಹಾದೇವಿ ನೀಲಪ್ಪ ಸೂಳಿಕೇರಿ ಇವರು ಮೇಲಿನ ಸರ್ಕರಿ ನಿಗದಿಪಡಿಸಿದ ದರಗಳಿಗೆ ತಮ್ಮ ಒಪ್ಪಿಗೆ ಇರುವುದಾಗಿ ತಿಳಿಸಿಧರು. ಅಪರ ಜಿಲ್ಲಾಧಿಕಾರಿಗಳು ಸರ್ವೇ ನಂ.121/2, 141/2 ಜಮೀನಿನ ಮೇಲೆ ಬ್ಯಾಂಕ ಭೋಜಾ ಇರುವ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ಆಗ ಜಿಲ್ಲಾಧಿಕಾರಿಗಳು ಈ ಜಮೀನನ್ನು ಖರೀದಿಸುವಾಗ ಇವರಿಗೆ ಸಂದಾಯ ಮಾಡುವ ಒಟ್ಟು ಮೊತ್ತದಲ್ಲಿ ಮೊದಲು ಬ್ಯಾಂಕಿನ ಭೋಜಾವನ್ನು ಭರಣಾ ಮಾಡಿ ಉಳಿದ ಮೊತ್ತವನ್ನು ಮಾಲೀಕರ ಹೆಸರಿಗೆ ನೀಡಬಹುದು ಎಂದು ತಿಳಿಸಿದರು.

ವರಂತೆ ಸದರಿ ಜಮೀನು ಡಾ.ಬಿ.ಆರ್.ಅಂಬೇಡ್ಕರ ವಸತಿ ಶಾಲೆಗಾಗಿ ಬೇಕಾಗಿದ್ದು ಸರ್ಕಾರದ ಅಧ್ಯತಾ ಯೋಜನೆ ಆಗಿರುವದರಿಂದ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶದ ಬಡ ಮಕ್ಕಳಿಗೆ ಅನುಕೂಲವಾಗುವುದರಿಂದ ಖರೀದಿಸುವುದು ಅನಿವಾರ್ಯವಿರುತ್ತದೆ.

ಆಗ ಜಿಲ್ಲಾಧಿಕಾರಿಗಳು ತಮ್ಮ ಒಪ್ಪಿಗೆಯನ್ನು ರೂ. 100/- ಛಾಪಾ ಕಾಗದದ ಮೇಲೆ ಬರೆದು ಕೊಡುವಂತೆ ಸೂಚಿಸಿದರು. ಒಂದು ಎಕರೆಗೆ ಉಪ ನೋಂದಣಿ ಅಧಿಕಾರಿಗಳು ಬೀಳಗಿ ಇವರ ಮೌಲ್ಯ ರೂ.6.00 ಲಕ್ಷಗಳು ಇದ್ದು, ಸರ್ಕಾರದ ಆದೇಶ ಸಂಖ್ಯೆ:ಸಕಇ131:ಮೊದೇಶಾ:2010 ದಿನಾಂಕ:26-10-2010 ರ ಅನ್ವಯ ಉಪ ನೋಂದಣಿ ಅಧಿಕಾರಿಗಳು ಬೀಳಗಿ ಇವರ ಮೌಲ್ಯ 6.00 ಲಕ್ಷಗಳ 3 ಪಟ್ಟು ಒಂದು ಎಕರೆಗೆ ರೂ 18 ಲಕ್ಷಗಳಿಗೆ ಖರೀದಿ ನೀಡಲು ಭೂಮಾಲೀಕರು ಒಪ್ಪಿಗೆಯಂತೆ ಒಟ್ಟು 9 ಎಕರೆ ಜಮೀನನ್ನು ಖರೀದಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು. ಮತ್ತು ಜಿಲ್ಲಾಧಿಕಾರಿಗಳು ಈ ಜಮೀನನ್ನು ಖರೀದಿ ಮಾಡಿಕೊಳ್ಳುವ ಕುರಿತು ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಕಾರ್ಯನಿರ್ವಾಹಕ ನಿರ್ದೇಶಕರು ಕ್ರೈಸ್ ಬೆಂಗಳೂರು ಇವರಿಗೆ ಕಳುಹಿಸುವಂತೆ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರಿಗೆ ಸೂಚಿಸಿದರು.

ಕೊನೆಗೆ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಾಗಲಕೋಟ ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಮಟ್ಟದ ನಿವೇಶನ ಖರೀದಿ ಸಮಿತಿ ಬಾಗಲಕೋಟ.

ಸಂಖ್ಯೆ:ಜಿಅ/ಉನಿಸಕಇ/ಸಮನ್ವಯ/ಎಸ್.7/ಸಿಆರ್/2018-19 ದಿನಾಂಕ: 16-07-2018

**ಪ್ರತಿಯನ್ನು :-**

1. ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ನಿರ್ದೇಶಕರು, ಕ್ರೈಸ್ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬಾಗಲಕೋಟ ಇವರಿಗೆ ಕ್ರಮಕ್ಕಾಗಿ.
4. ಕಛೇರಿ ಕಡತಕ್ಕೆ.